ಸಾಕ್ಷಿ ಯನ್ನು ದಿಃ 25.06.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಾನು ಬೇಗೂರು ಹಾಗೂ ಪಿರಿಯಾಪಟ್ಟಣದಲ್ಲಿ ವಾಸವಿದ್ದೇನೆ.
2. ನಾನು ವ್ಯವಸಾಯ ಮಾಡುತ್ತೇನೆ.
3. ನನ್ನ ಮಾವ ಜವರಯ್ಯನವರ ಹೆಸರಿನಲ್ಲಿ 8 ಎಕರೆ ಜಮೀನು ಇದೆ. ನನ್ನ ಹೆಸರಿನಲ್ಲಿ ಇಲ್ಲ. ಅವುಗಳ ಸರ್ವೇ ನಂಬರ್ ನನಗೆ ನೆನಪಿಲ್ಲ.
4. ಜಮೀನಿನಲ್ಲಿ ನನ್ನ ಪತಿ ಹಾಗೂ ನಾನು ಒಟ್ಟಿಗೆ ವ್ಯವಸಾಯ ಮಾಡುತ್ತೇವೆ.
5. ವ್ಯವಸಾಯದಿಂದ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಎಂದರೆ, ಈಗ 3 ವರ್ಷದಿಂದ ಇಲ್ಲ, ಅದಕ್ಕಿಂತ ಮುಂಚೆ ವರ್ಷಕ್ಕೆ 10-15 ಲಕ್ಷ ಆದಾಯ ಇತ್ತು. ಜಮೀನಲ್ಲಿ ಶುಂಠಿ, ಜೋಳ, ತಂಬಾಕು ಹಾಗೂ ಮೆಣಸಿನಕಾಯಿ ಬೆಳೆಯುತ್ತೇವೆ.
6. ಶುಂಠಿಯನ್ನು ವ್ಯಾಪಾರಿಗಳಿಗೆ ಕೊಟ್ಟು ಮಾರಾಟ ಮಾಡುತ್ತೇವೆ. ಅವರ ಹೆಸರುಗಳು ಗೊತ್ತಿಲ್ಲ.
7. ಯಾವ ಯಾವ ವರ್ಷ ಎಷ್ಟು ಶುಂಠಿ ಮಾರಾಟ ಮಾಡಿದ್ದೇವೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ, ಇದೆ, ನೋಡಬೇಕು ಎಂದು ನುಡಿಯುತ್ತಾರೆ.
8. ಯಾವ ಯಾವ ವರ್ಷ ಎಷ್ಟು ಶುಂಠಿ ಬೆಳೆದಿದ್ದೀರಾ ಎಂದರೆ, 2021 ರಲ್ಲಿ 150 ಚೀಲ, 2022 ರಲ್ಲಿ 120 ಚೀಲ ಹಾಗೂ 2023 ರಲ್ಲಿ 100 ಮೂಟೆ ಬೆಳೆದಿದ್ದೆವು. ಸದರಿ ಶುಂಠಿಗಳನ್ನು ಯಾರಿಗೆ ಹಾಗೂ ಎಷ್ಟಕ್ಕೆ ಮಾರಾಟ ಮಾಡಿದ್ದೇವೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ, ಇದೆ.
9. ಸದರಿ ಶುಂಠಿ ಬೆಳೆಯಲು ಎಕರೆಗೆ 3 ಲಕ್ಷ ಬರುತ್ತದೆ.
10. 2021 ರಲ್ಲಿ ಖರ್ಚು ಕಳೆದು 7-8 ಲಕ್ಷ ಲಾಭ ಬಂದಿತ್ತು. ಸದರಿ ಲಾಭಾಂಶವನ್ನು ಬ್ಯಾಂಕಿನಲ್ಲಿ ಇಟ್ಟು ವ್ಯವಹಾರ ಮಾಡುತ್ತಿದ್ದೀರಾ ಎಂದರೆ, ಖರ್ಚಿಗೆ ಇಟ್ಟುಕೊಂಡು ಉಳಿದಿದ್ದನ್ನು ಬ್ಯಾಂಕಿನಲ್ಲಿ ಇಡುತ್ತೇವೆ. ಆ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ, ಕೊಡುತ್ತೇನೆ ಎಂದು ನುಡಿಯುತ್ತಾರೆ.
11. ಆರೋಪಿ ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ, ಅವರು ನನಗೆ ಪರಿಚಯನೇ ಇರಲಿಲ್ಲ, ಆತ ನಮ್ಮ ಮನೆ ಖರೀದಿ ಮಾಡಿದ ಬೂದಿತಿಟ್ಟು ಗ್ರಾಮದ ಮಾದೇಶ ರವರು ಆರೋಪಿಯ ಬಳಿ ಕೆಲಸಕ್ಕೆ ಹೋಗುತ್ತಿದ್ದರು. ಆತನ ಕಡೆಯಿಂದ ಪರಿಚಯವಾಗಿರುತ್ತಾರೆ.

12. ನಿಮಗೆ ಹಾಗೂ ಆರೋಪಿಗೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ, ಹಣ ಕೊಡುವ 2-3 ದಿನದ ಮುಂಚೆ ಮಾದೇಶ ಕರೆದುಕೊಂಡು ಬಂದು ಮಾತನಾಡಿದ್ದರು.

13. ಆರೋಪಿಗೆ ನೀಡಿದ 7 ಲಕ್ಷ ಹಣವನ್ನು ಮನೆ ಕಟ್ಟಲು ಮನೆಯಲ್ಲಿ ಇಟ್ಟುಕೊಂಡಿದ್ದೆ.

14. ನಮ್ಮ ಮನೆ ಬೂದಿತಿಟ್ಟು ಗ್ರಾಮದಲ್ಲಿ ಇತ್ತು. ಅದು ನನ್ನ ಹೆಸರಿನಲ್ಲಿ ಇತ್ತು. ಅದನ್ನು 5 ಲಕ್ಷಕ್ಕೆ ಮಾರಾಟ ಮಾಡಿದ್ದೆವು. ಆ ಬಗ್ಗೆ ದಾಖಲೆ ಇದೆ.

15. ಆರೋಪಿ ಯಾವಾಗ ನಿಮ್ಮ ಬಳಿ ಹಣ ಕೇಳಿದ್ದರು ಎಂದರೆ, ಹಣ ಕೊಡುವ 4 ದಿನದ ಮುಂಚೆ ಮಾದೇಶನ ಜೊತೆ ಬಂದಿದ್ದರು. ದಿನಾಂಕ ನನಗೆ ನೆನಪಿಲ್ಲ.

16. ಹಣ ನೀಡಿದ ದಿನಾಂಕ ದಿಃ 20.10.2023 ರಂದು ನೀಡಿದ್ದೆ. ಆ ಸಮಯದಲ್ಲಿ ಆರೋಪಿ, ಮಾದೇಶ ಹಾಗೂ ಇನ್ನೊಬ್ಬರು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ.

17. ಹಣವನ್ನು ಆರೋಪಿಗೆ ಚೆಕ್ ಮೂಲಕ ನೀಡಲು ತೊಂದರೆ ಇತ್ತಾ ಎಂದರೆ, ನನಗೆ ಅದರ ಬಗ್ಗೆ ಅರಿವಿಲ್ಲ ಎಂದು ನುಡಿಯುತ್ತಾರೆ.

18. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

19. ನಿಮ್ಮ ದೂರಿನಲ್ಲಿ ಆರೋಪಿಯು ಮಾದೇಶ ರವರ ಕಡೆಯಿಂದ ಪರಿಚಯವಾದ ಬಗ್ಗೆ ಬರೆಸಿದ್ದೀರಾ ಎಂದರೆ, ಇಲ್ಲ.

20. ಆರೋಪಿಗೆ ಹಣ ಪಡೆದ ದಿನವೇ ಚೆಕ್ ನೀಡಿದ್ದರಾ ಎಂದರೆ, ಇಲ್ಲ. ಆರೋಪಿ ದಿಃ 20.10.2023 ರಂದು ನೀಡಿದ್ದರು, ಅದಕ್ಕಿಂತ ಮುಂಚೆ ನಾನು ಹಣ ನೀಡಿದ್ದೆ.

21. ನಿಪಿ - 1ರ ಚೆಕ್ಕನ್ನು ಬರೆದುಕೊಟ್ಟವರು ಯಾರು ಎಂದರೆ, ಆರೋಪಿಯೇ ಬರೆದು ಕೊಟ್ಟಿರುತ್ತಾರೆ.

22. ನಿಪಿ - 1 ರ ಬರವಣಿಗೆಗೆ ಹಾಗೂ ನಿಪಿ-1(ಎ)ರ ಸಹಿಯ ಬರವಣಿಗೆಗೆ ವ್ಯತ್ಯಾಸ ಇದೆ ಎಂದರೆ ಸರಿ. ನನ್ನ ಮುಂದೆಯೇ ಬರೆದು ನನ್ನ ಮುಂದೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

23. ನಮಗೆ ವಾರ್ಷಿಕ 10-15 ಲಕ್ಷ ಆದಾಯವಿರುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ, ಸಿಕ್ಕಿದರೆ ಕೊಡುತ್ತೇನೆ ಎಂದು ನುಡಿಯುತ್ತಾರೆ.

24. ನಿಮ್ಮ ಮಾವನ ಹೆಸರಿನಲ್ಲಿರುವ ಜಮೀನಿನ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರಾ ಎಂದರೆ, ಸ್ವಲ್ಪ ಮಾಡಿದ್ದಾರೆ ಎಂದು ನುಡಿಯುತ್ತಾರೆ.

25. ನಮಗೆ ಬಿ.ಪಿ.ಎಲ್ ಪಡಿತರ ಚೀಟಿ ಇದೆ. ಬಿ.ಪಿ.ಎಲ್ ಪಡಿತರ ಚೀಟಿಯನ್ನು ಅತೀ

ಬಡವರಿಗೆ ಮಾತ್ರ ನೀಡುತ್ತಾರೆ ಎಂದರೆ, ನಾವೂ ಬಡವರು ಎಂದು ನುಡಿಯುತ್ತಾರೆ.

26. ನೀವೇ ಬಡವರಾದ ಕಾರಣ ನಿಮಗೆ 7 ಲಕ್ಷ ಹಣ ನೀಡುವಷ್ಟು ಆರ್ಥಿಕ ಚೈತನ್ಯ ಇಲ್ಲ ಎಂದರೆ, ನನ್ನ ತಂದೆ ಕಡೆಯ ಜಮೀನು ಮಾರಾಟ ಮಾಡಿದ್ದು, ನಿವೇಶನ ಮಾರಿದ್ದು ಹಾಗೂ ಬೂದಿತಿಟ್ಟು ಮನೆ ಮಾರಿದ್ದರಿಂದ ಹಣ ಇತ್ತು ಎಂದು ನುಡಿಯುತ್ತಾರೆ.
27. ಆರೋಪಿ ನಮ್ಮ ಮನೆ ಕಟ್ಟಿಕೊಡಲು 15 ಲಕ್ಷಕ್ಕೆ ಮಾತುಕತೆಯಾಗಿ 7 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿದ್ದರು. ಸದರಿ ವಿಚಾರವನ್ನು ನಿಮ್ಮ ದೂರಿನಲ್ಲಿ ಬರೆಸಿದ್ದೀರಾ ಎಂದರೆ, ನನಗೆ ಗೊತ್ತಿಲ್ಲ. ಅದರ ಸಲುವಾಗಿ ಯಾವುದೇ ಅಗ್ರಿಮೆಂಟ್ ಮಾಡಿಕೊಂಡಿಲ್ಲ.
28. ನನ್ನ ಪಿರ್ಯಾಧಿಯಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ನೆನಪಿಲ್ಲ.
29. ಮನೆ ಕಟ್ಟುವ ವ್ಯವಹಾರದ ಮಾತುಕತೆಯಾದಾಗ, ನಾನು, ಮಾದೇಶ, ಮಾದೇಶ ಪತ್ನಿ ರೇಖಾ, ಅವರ ಅಕ್ಕ ಗೌರಕ್ಕ ಹಾಗೂ ಆರೋಪಿ ಇದ್ದೆವು.
30. ಮನೆಯನ್ನು ಪಿರಿಯಾಪಟ್ಟಣದ ಟ್ಯಾಂಕ್ ಬಡಾವಣೆಯಲ್ಲಿರುವ ನಮ್ಮ ಮನೆಯ ಮೇಲೆ ಕಟ್ಟಬೇಕಾಗಿತ್ತು ಎಂದು ನುಡಿಯುತ್ತಾರೆ.
31. ನಿಮ್ಮ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.
32. ನಿಮಗೆ ಆರೋಪಿಗೆ ಹಣ ನೀಡುವಷ್ಟು ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ.
33. ಮಾದೇಶ ರವರ ಮಾತು ಕೇಳಿ, ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
34. ಆರೋಪಿ ನಿಮಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ